ದಿ: 07-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲುಃಃ ಪಿರ್ಯಾದಿ ಪರ ವಕೀಲರಾದ ಶ್ರೀ ಎನ್ ವಿ ರವರಿಂದಃಃ

ನಾನು ನ್ಯಾಯಾಲಯದಲ್ಲಿ ಬೇಲ್ ಪಡಿದಿದ್ದು ಜಾಮೀನು ನೀಡಿಲ್ಲ ಎಂದರೆ ಸರಿಯಲ್ಲ. ನಾನು 1981 ನೇ ಸಾಲಿನಿಂದ ವಕೀಲ ವೃತ್ತಿಯಲ್ಲಿರುತ್ತೇನೆ. ನ್ಯಾಯಾಲಯದಲ್ಲಿ ಯಾವುದೇ ಅರ್ಜಿ ಸಲ್ಲಿಸಿದಾಗ ಎದುರುದಾರರಿಗೆ ಸದರಿ ಅರ್ಜಿಯ ಪ್ರತಿ ನೀಡಬೇಕು ಎಂದರೆ ಸರಿ. ಆದರೇ ಅವರು ಇಲ್ಲದ ಕಾರಣ ಆ ಬಗ್ಗೆ ಷರಾ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಬಹುದು. ಸಿಸಿ 81/2012 ರ ಪ್ರಕರಣದಲ್ಲಿ ಸದರಿ ಪ್ರಕರಣವನ್ನು ಮುಂಗಡವಾಗಿ ಕರೆಯಲು ಸಲ್ಲಿಸಿರುವ ಅರ್ಜಿಯಲ್ಲಿ ವಕೀಲರ ಸಹಿ ಇರುವುದಿಲ್ಲ ಹಾಗೂ ಎದುರು ಪಕ್ಷಗಾರರರಿಗೆ ಸದರಿ ಅರ್ಜಿ ಸಲ್ಲಿಸಿರುವ ಬಗ್ಗೆ ಮಾಹಿತಿ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಅದನ್ನು ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಘನ ನ್ಯಾಯಾಲಯವು ಸ್ವೀಕರಿಸಲಾಗಿದೆ ಎಂದು ನುಡಿದಿರುತ್ತಾರೆ

2000 ನೇ ಸಾಲಿನಲ್ಲಿ ನಾನು ಕಲ್ಯಾಣ ಮಂಟಪವನ್ನು ಕಟ್ಟಿಸಲು ಪ್ರಾರಂಭ ಮಾಡಿದ್ದು ಅದೇ ವರ್ಷದಲ್ಲಿ ಕಟ್ಟಡ ನಿರ್ಮಾಣ ಮುಕ್ತಾಯಗೊಂಡಿರುತ್ತದೆ. ಆ ಸಮಯದಲ್ಲಿ ಸದರಿ ಕಟ್ಟಡಕ್ಕೆ ಪಿರ್ಯಾದಿದಾರರು ನೀರ ಸರಭರಾಜು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಕಟ್ಟಡದ ನಿರ್ಮಾಣಕ್ಕೆ ನೀರು ಸರಭರಾಜಿಗಾಗಿ ನಾನು ಸ್ವಂತ ಬೋರ್ ವೆಲ್ ಹೊಂದಿದ್ದೆ. ನನಗೆ ಸೇರಿದ ಕಟ್ಟಡಕ್ಕೆ 3 ಕಡೆ ಕಾಂಪೌಂಡ್ ಇದ್ದು ಮತ್ತೊಂದು ಕಡೆ ಕಾಂಪೌಡ್ ಇರುವುದಿಲ್ಲ, ಅದನ್ನು ಡಿ ಸಿ ರವರ ಆದೇಶದ ಮೇಲೆ ಮಾಡಲಾಗಿರುತ್ತದೆ. ಈ ಪ್ರಕರಣವನ್ನು ಸಲ್ಲಿಸಿದ ನಂತರ ನನಗೆ ಪಿರ್ಯಾದಿದಾರರ ಪರಿಚಯವಾಗಿರುತ್ತದೆ . ಪಿರ್ಯಾದಿದಾರರು ಹಿರೇಬಿದನೂರು ಗ್ರಾಮ ಪಂಚಾಯತಿಯ ನೌಕರ, ಅಧ್ಯಕ್ಷ ಮತ್ತು ಸದಸ್ಯನಲ್ಲ ಎಂದರೆ ನನಗೆ ಗೊತ್ತಿಲ್ಲ. ಉಗ್ರಪ್ಪ ಎಂಬುವವರು 2010 ನೇ ಸಾಲಿನಲ್ಲಿ ಹಿರೇಬಿದನೂರು ಗ್ರಾಮ ಪಂಚಾಯತಿಯಲ್ಲಿ ಇದ್ದ ಬಗ್ಗೆ ಮಾತ್ರ ನನಗೆ ಗೊತ್ತು, ಬೇರೆಯವರ ಬಗ್ಗೆ ನನಗೆ ಗೊತ್ತಿಲ್ಲ.

1989 ನೇ ಸಾಲಿನಿಂದ ನಾನು ಕೆನರಾ ಬ್ಯಾಂಕಿನ ಪ್ಯಾನೆಲ್ ವಕೀಲನಾಗಿದ್ದೆ. ನನ್ನ ಪ್ಯಾನೆಲ್ ವಕೀಲ ವೃತ್ತಿ ಯಾವತ್ತು ಮಟುಕುಗೊಂಡಿರಲಿಲ್ಲ. ನಿಪಿ-1 ರಲ್ಲಿನ ಸಹಿ ನಿಮ್ಮದೇ ಎಂದು ಕೇಳಲಾಗಿ ಸಾಕ್ಷಿಯು ನನಗೇ ಆ ಬಗ್ಗೆ ಹೇಳಲು ಸಾಧ್ಯವಿಲ್ಲ ಎಂದು ನುಡಿದಿರುತ್ತಾರೆ.

ನಿಪಿ-1 ರ ಚೆಕ್ ನಿಮ್ಮ ಖಾತೆಗೆ ಸೇರಿದ್ದು ಎಂದು ಕೇಳಾಗಿ ಸಾಕ್ಷಿಯು ಆ ಬಗ್ಗೆ ಹೇಳಲು ಸಾಧ್ಯವಿಲ್ಲ ಎಂದು ನುಡಿದಿರುತ್ತಾರೆ. ನೀವು ಹೊಸೂರು ಕೆನರಾ ಬ್ಯಾಂಕಿನ ಪ್ಯಾನಲ್ ವಕೀಲರು ಎಂದರೆ ಸರಿ. ಈ ಹಂತದಲ್ಲಿ ಸಾಕ್ಷಿಗೆ ಸಿಸಿ 81/2012 ರ ಪ್ರಕರಣದಲ್ಲಿನ ವಕಾಲತ್ ತೋರಿಸಿ ಸದರಿ ವಕಾಲತ್ ನಲ್ಲಿನ ಸಹಿ ನಿಮ್ಮದೇ ಎಂದು ಕೇಳಲಾಗಿ ಸಾಕ್ಷಿಯು ಸದರಿ ಸಹಿಯನ್ನು ನೋಡಿ ಹೌದು ಎಂದು ನುಡಿದ ಮೇರೆಗೆ ಸದರಿ ವಕಾಲತ್ ಅನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6 (ಎ) ಗುರುತಿಸಲಾಯಿತು. ಈ ಹಂತದಲ್ಲಿ ಸಾಕ್ಷಿಗೆ ಒಂದು ಅಂಚೆ ಸ್ವೀಕೃತಿಯನ್ನು ತೋರಿಸಿ ಸದರಿ ದಾಖಾತಿಯಲ್ಲಿನ ಸಹಿ ನಿಮ್ಮದೇ ಎಂದು ಕೇಳಲಾಗಿ ಸಾಕ್ಷಿಯು ಸದರಿ ಸಹಿಯನ್ನು ನೋಡಿ ಹೌದು ಎಂದು ನುಡಿದ ಮೇರೆಗೆ ಸದರಿ ದಾಖಲಾತಿಯನ್ನು ನಿಪಿ-7 ಎಂದು, ಸಾಕ್ಷಿಯನ್ನು ನಿಪಿ-7 (ಎ)ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿನ ನೋಟೀಸ್ ನಲ್ಲಿನ ಸಹಿ ನನ್ನದೆ ಎಂದು ಆರೋಪಿ ನುಡಿದ ಮೇರೆಗೆ ಸದರಿ ಸಹಿಗಳನ್ನು ನಿಪಿ-3 (A to D) ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಪ್ರತ್ಯುತ್ತರ ಪತ್ರದಲ್ಲಿನ ಕೆಲವು ಅಂಶಗಳ ಬಗ್ಗೆ ನನಗೆ ಗೊತ್ತಿರುತ್ತದೆ ನಿಪಿ-3 ರಲ್ಲಿ ಮೊದಲ ಪುಟದ ಕೊನೆಯ ಕೆಳಗಿನ 2 ಸಾಲುಗಳಲ್ಲಿ ಬರೆದಿರುವ ವಿಷಯ ಉಗ್ರಪ್ಪ ಎಂಬುವವರಿಗೆ ಸಂಬಂದಿಸಿದಂತೆ ಬರೆಸಿರುತ್ತೇನೆ. 2010 ನೇ ಸಾಲಿನ ನವೆಂಬರ್ ಮಾಹೆಯಲ್ಲಿ ಉಗ್ರಪ್ಪನವರಿಗೆ ನಾನು ಚೆಕ್ ನೀಡಿರುತ್ತೇನೆ. ಉಗ್ರಪ್ಪನವರಿಗೆ ಚೆಕ್ ಅನ್ನು ಒತ್ತಾಯ ಪೂರ್ವಕವಾಗಿ ನೀಡಿರುವ ವಿಚಾರ ಬ್ಯಾಂಕ್ ನಲ್ಲಿ ತಿಳಿಸಿದ್ದೀರಾ ಎಂದು ಕೇಳಲಾಗಿ ಸಾಕ್ಷಿಯು ಅಂತಹ ಪರಿಸ್ಥಿತಿ ಬರಲಿಲ್ಲ ಎಂದು ಉತ್ತರಿಸಿರುತ್ತಾರೆ. ಪಿರ್ಯಾದಿದಾರರಿಂದ ನೋಟೀಸ್ ಬಂದ ನಂತರ ಈಗಾಗಲೇ ಪ್ರಕರಣ ದಾಖಲಾಗಿದೆ ಎಂದು ತಿಳಿದ ಕಾರಣ ನಾನು ನ್ಯಾಯಾಲಯದಲ್ಲಿಯೇ ಉತ್ತರ ನೀಡಿರುತ್ತೇನೆ, ಬ್ಯಾಂಕ್‌ಗೆ ಹೋಗಿರುವುದಿಲ್ಲ. ಪಿರ್ಯಾದಿದಾರರಿಗೆ ನೀವು ಅವರ ನೋಟೀಸ್ ಗೆ ಮರು ಉತ್ತರ ನೀಡಿದ ನಂತರ ಅವರು ಖಾಸಗೀ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸಾಕ್ಷಿಯು ಆ ಬಗ್ಗೆ ದಿನಾಂಕ ನೋಡಿದರೆ ಹೇಳಬಹುದು ಎಂದು ನುಡಿದಿರುತ್ತಾರೆ.

ವಕೀಲರ ಕೋರಿಕೆಯ ಮೇರೆಗೆ ಮು. ಪಾಟೀ ಸವಾಲಿಗೆ ಮುಂದೂಡಲಾಯಿತು.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಗಣಕೀಕೃತಗೊಳಿಸಲಾಯಿತು)**

ಓ.ಹೇ.ಕೇ.ಸ.ಇದೆ.

ಸಿ.ಜೆ ಮತ್ತು ಜೆ.ಎಮ್.ಎಫ್.ಸಿ
ಗುಡಿಬಂಡೆ.